ಮುಂಬೈ ಆಗಿದೆ ಇದರ ಈಗಿನ ಪ್ರತಿನಿತ್ಯದ ವಹಿವಾಟು ಸುಮಾರು ರೂ 75 ರಿಂದ 80 ಲಕ್ಷಗಳಷ್ಟಿದೆ

ಆ) ಅನಧಿಕೃತವಾಗಿ ಯಾವ ಕಂಪನಿಯವರು ಆನ್‌ಲೈನ್ ಲಾಟರಿ ನಡೆಸುತ್ತಿಲ್ಲ, ಕೇಂದ್ರ ಸರ್ಕಾರದ ಲಾಟರಿ ರೆಗ್ಯುಲೇಷನ್ ಕಾಯಿದೆ 1998 ರನ್ವಯ ಕರ್ನಾಟಕ ರಾಜ್ಯವು "ಲಾಟರಿ ಮುಖ್ಯ ವಲಯ" ವಲ್ಲದ ಕಾರಣ ಹೊರರಾಜ್ಯದ ಲಾಟರಿ ಕಂಪನಿಗಳು ನಮ್ಮ ರಾಜ್ಯದಲ್ಲಿ ಆನ್‌ಲೈನ್ ಲಾಟರಿ ನಡೆಸುತ್ತಾರೆ ಇವರ ಪ್ರತಿನಿತ್ಯದ ವಹಿವಾಟಿನ ಮಾಹಿತಿ ಲಭ್ಯವಿರುವುದಿಲ್ಲ

ಇ) ಕರ್ನಾಟಕ ರಾಜ್ಯ ಸರ್ಕಾರವು ಗಣಕೀಕೃತ ನೆಟ್‌ವರ್ಕ್ ಲಾಟರಿ ಪ್ರಾರಂಭಿಸುವ ಮುನ್ನ ಮಾರುಕಟ್ಟೆ ಏಜೆಂಟರೊಂದಿಗೆ 5 ವರ್ಷಗಳ ಒಪ್ಪಂದ ಮಾಡಿಕೊಂಡು ಪರವಾನಗಿ ನೀಡಿದೆ ಆನ್‌ಲೈನ್ ಲಾಟರಿ ನಿಷೇದ ಕುರಿತಂತೆ ಪ್ರತಿಭಟನೆ ಚಳುವಳಿಗಳು ಸರ್ಕಾರದ ಗಮನಕ್ಕೆ ಬಂದಿದ್ದು ಈ ಕುರಿತು ಕೂಲಂಕುಶ ಪರಿಶೀಲನೆ ನಡೆಯುತ್ತಿದೆ

ಬಿ ಡಿ ಎ ಯಿಂದ ಭೂಸ್ವಾಧೀನತೆಯಿಂದ ಕೈ ಬಿಟ್ಟಿರುವ ಪ್ರಕರಣಗಳ ಬಗ್ಗೆ

77 (303) ಶ್ರೀ ಸಿಂಧ್ಯಾ ಪಿ ಜಿ ಆರ್ (ಕನಕಪುರ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ 3 ವರ್ಷಗಳಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಭೂಸ್ವಾಧೀನತೆಯನ್ನು ಕೈ ಬಿಟ್ಟಿರುವ ಪ್ರಕರಣ ಸಂಖ್ಯೆ ಎಷ್ಟು

ಆ) ಈ ಪ್ರಕರಣಗಳ ಭೂಸ್ವಾಧೀನತೆಯನ್ನು ಕೈ ಬಿಡಲು ಕಾರಣಗಳೇನು, ವಿವರಗಳನ್ನು ನೀಡುವುದು?

ಶ್ರೀ ಎಸ್ ಎಂ ಕೃಷ್ಣ (ಮುಖ್ಯಮಂತ್ರಿಯವರು)

ಅ) 2001ನೇ ಏಪ್ರಿಲ್ ನಿಂದ 16 ಪ್ರಕರಣಗಳು

ಆ) ಭೂಸ್ವಾಧೀನತೆಯಿಂದ ಕೈ ಬಿಡಲಾದ ಒಟ್ಟು 180 ಎಕರೆ 16 ಗುಂಟೆ ಜಮೀನಿನಲ್ಲಿ 111 ಎಕರೆ 09 ಗುಂಟೆ ಜಮೀನಿನ ವಿಸ್ತೀರ್ಣವನ್ನು ಹೊರ ವರ್ತುಲ ರಸ್ತೆಯ ಇಕ್ಕೆಲಗಳಲ್ಲಿ ಭೂಸ್ವಾಧೀನದಿಂದ ಹೊರತುಪಡಿಸಲಾಗಿದೆ 10 ಎಕರೆ 18 ಗುಂಟೆ ವಿಸ್ತೀರ್ಣದ ಜಮೀನನ್ನು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ರವರ ಪರವಾಗಿ ಸಮಾನಾಂತರ ಅಧಿಸೂಚನೆ ಮಾಡಿದ್ದರಿಂದ ಮತ್ತು ಉಳಿಕೆ 58 ಎಕರೆ 29 ಗುಂಟೆ ಜಮೀನು ಅನಧಿಕೃತ ಕಟ್ಟಡಗಳಿಂದ ಆವೃತ್ತಗೊಂಡಿದ್ದ ಕಾರಣದಿಂದ ಭೂಸ್ವಾಧೀನ ಅಧಿಸೂಚನೆಯಿಂದ ಹೊರತುಪಡಿಸಲಾಗಿದೆ

ಕರ್ನಾಟಕದಲ್ಲಿ ಖಾಲಿ ಇರುವ ಉಪಲೋಕಾಯುಕ್ತ ಹುದ್ದೆಯ ಭರ್ತಿಯ ಬಗ್ಗೆ

80 (295) ಶ್ರೀ ಸೋಮಶೇಖರ್ ಬಿ (ಮಳವಳ್ಳಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ಲೋಕಾಯುಕ್ತದಲ್ಲಿ ಮಾನ್ಯ ಉಪ ಲೋಕಾಯುಕ್ತರ ಹುದ್ದೆ ಖಾಲಿಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ, ಈವರೆವಿಗೂ ತುಂಬದಿರಲು ಕಾರಣಗಳೇನು ವಿವರಗಳನ್ನು ನೀಡುವುದು,